ಕಿಶೋರಿ ಬಾಲ್ಯದಿಂದಲೂ ಸಂಗೀತದಲ್ಲಿ ಅಪಾರ ಪ್ರತಿಭೆಯಿದ್ದ ಹುಡುಗಿ. ಸುಮಾರು ಹತ್ತು ವರ್ಷವಾಗಿದ್ದಾಗ ಅವರಿಗೆ ಸಂಗೀತ ಕಲಿಸಲು ಅವರ ತಾಯಿ ಗುರುಗಳೊಬ್ಬರನ್ನು ನೇಮಿಸಿದ್ದರು. ಕಿಶೋರಿಯವರ ಧ್ವನಿ ಸುಲಲಿತವಾಗಿಲ್ಲ, ನಮ್ಯವಾಗಿಲ್ಲ ಎಂಬ ಬೇಸರ ಆ ಗುರುಗಳಿಗಿತ್ತು. ಇದನ್ನು ಅವರು ಅಮ್ಮ ಮತ್ತು ಮಗಳಿಗೆ ಹೇಳಿದರು. ಈ ಆಕ್ಷೇಪ ಕಿಶೋರಿಯವರನ್ನು ತುಂಬಾ ಚುಚ್ಚಿತ್ತು. ಬಹುಶಃ ಅವರ ತಾಯಿಗೂ ನೋವಾಗಿತ್ತು ಎನಿಸುತ್ತದೆ. ಅಂದಿನಿಂದ ಕಿಶೋರಿಗೆ ಅಮ್ಮ ಮೋಗೂಬಾಯಿಯವರೇ ಪಾಠ ಹೇಳಿಕೊಡಲಾರಂಭಿಸಿದರು. ಕಿಶೋರಿಯವರು ಅಮ್ಮನ ಪಾಠದ ಕ್ರಮವನ್ನು ವಿವರಿಸುತ್ತಾ ತಮ್ಮ ಮಾತುಗಳಲ್ಲೇ ಹೇಳಿಕೊಂಡಂತೆ, "ನಮ್ಮಮ್ಮ ಸಂಗೀತದ ಬಗ್ಗೆ ಮಾತನಾಡುತ್ತಿರಲಿಲ್ಲ. ಅವರು ಹಾಡುತ್ತಿದ್ದರು, ನಾನು ಹಾಗೇ ಹಾಡುತ್ತಿದ್ದೆ. ಅವರನ್ನು ಏನೂ ಕೇಳದೆ ಹಾಗೆ ಹಾಡುತ್ತಿದ್ದೆ. ಅವರು ಸ್ಥಾಯಿ ಮತ್ತು ಅಂತರಾ ಎರಡು ಸಲ ಮಾತ್ರ ಹಾಡುತ್ತಿದ್ದರು. ಅಷ್ಟರಲ್ಲಿ ಅದರ ಎಲ್ಲಾ ಛಾಯೆಗಳನ್ನೂ ಗ್ರಹಿಸಬೇಕಿತ್ತು. ಶುದ್ಧಕಲ್ಯಾಣ್ ರಾಗದ ರಿಷಭಕ್ಕೂ ಮತ್ತು ಭೂಪ್ ರಾಗದ ರಿಷಭಕ್ಕೂ ಇರುವ ವ್ಯತ್ಯಾಸವೇನು ಎಂದು ನನ್ನನ್ನು ಕೇಳುತ್ತಿದ್ದರು. ಅವೆರಡೂ ರಾಗದ ರಿಷಭ ಒಂದೇ. ಆದರೆ ಈ ರಾಗಗಳಲ್ಲಿ ಅವುಗಳನ್ನು ಅನುಸಂಧಾನ ಮಾಡಿ, ಸ್ಪರ್ಶಿಸುವ ರೀತಿ ಸ್ವಲ್ಪ ಬೇರೆ. ಹೀಗೆ ಅಮ್ಮ ಪ್ರಶ್ನಿಸಿದಾಗ, ಉತ್ತರ ಹುಡುಕಲು ನಾನು ತುಂಬಾ ಆಳವಾಗಿ ಯೋಚಿಸಬೇಕಾಗುತ್ತಿತ್ತು. ಅವರು ಏಕಾಗ್ರತೆಯನ್ನು ಕಲಿಸಿದರು. ವಿಭಿನ್ನ ಬಂದಿಶ್‌ಗಳು, ರಾಗಗಳು, ಮುಂತಾದವನ್ನು ಕಲಿಸುತ್ತಲೇ ನನಗವರು ಸ್ವರದ ಸಾಂಪ್ರದಾಯಿಕ ಜ್ಞಾನ, ಸಾಂಪ್ರದಾಯಿಕ ಕ್ರಮ, ಸಾಂಪ್ರದಾಯಿಕ ಶುದ್ಧತೆಯನ್ನು ಕಲಿಸಿದರು. ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಒಂದಿಷ್ಟು ಮರಾಠಿ ಹಾಡುಗಳು, ಭಜನ್‌ಗಳು ಹೀಗೆ ಎಲ್ಲಾ ಬಗೆಯ ಸಂಗೀತ ನನಗೆ ಗೊತ್ತಿರಬೇಕು ಅನ್ನುವುದು ಅವರ ಆಸೆಯಾಗಿತ್ತು."

ಕಿಶೋರಿಯವರಿಗೆ ಬೇರೆ ಬೇರೆ ಶೈಲಿಯ ಹಲವು ಸಂಗೀತಗಾರರಿಂದ ಶಿಕ್ಷಣವನ್ನು ಕೊಡಿಸಿದರು. ಆಗ್ರಾ ಘರಾನೆಯ ಅನ್ವರ್ ಹುಸೇನ್‌ಖಾನ್, ಭೇಂಡೀ ಬಜಾರ್ ಘರಾನೆಯ ಅಂಜನೀಬಾಯಿ ಮಲ್ಪೇಕರ್, ಗ್ವಾಲಿಯರ್ ಘರಾನೆಯ ಶರದ್‌ಚಂದ್ರ ಅರೋಲ್‌ಕರ್ ಮತ್ತು ಮೋಹನ್‌ರಾವ್ ಪಾಲೇಕರ್, ಗೋವಾದ ಹೆಸರಾಂತ ಸಂಗೀತಗಾರ ಬಾಲಕೃಷ್ಣ ಬುವಾ ಪರ್ವತ್ಕರ್ ಮುಂತಾದವರಿಂದ ಶಿಕ್ಷಣ ಪಡೆದರು.ಇಂತಹ ವೈವಿಧ್ಯಮಯ ಕಲಿಕೆಯಿಂದ ಅವರಿಗೆ ಘರಾನೆಗಳನ್ನು ಮೀರಿ ಯೋಚಿಸುವುದಕ್ಕೆ ಸಾಧ್ಯವಾಯಿತು. ಮೂಲತಃ ಅವರು ಅತ್ರೌಲಿ ಜೈಪುರ್ ಘರಾನೆಯವರಾದರೂ ಅವರ ಸೃಜನಶೀಲ ಪ್ರತಿಭೆಯಿಂದಾಗಿ ಅವರು ಸಂಗೀತವನ್ನು ಹೆಚ್ಚು ಸ್ವೀಕರಣಶೀಲ ಹಾಗೂ ಪ್ರಾತಿನಿಧಿಕವಾಗುವಂತೆ ಮಾಡಿದರು. ಅವರದು ಅತ್ರೌಲಿ ಜೈಪುರ ಎಂಬ ಬುನಾದಿಯ ಮೇಲೆ ನಿರ್ಮಿತವಾದ ಒಂದು ಭವ್ಯ ಸಂಗೀತಸೌಧ.

ಉಳಿದಂತೆ ಕಿಶೋರಿಯವರ ಬಾಲ್ಯ ಸಾಮಾನ್ಯ ಮಕ್ಕಳಂತೆಯೇ ಇತ್ತು. ಅವರೊಬ್ಬ ಪ್ರತಿಭಾವಂತ ವಿದ್ಯಾರ್ಥಿನಿ. ವೈದ್ಯರಾಗಬೇಕೆಂಬ ಆಸೆ ಅವರಿಗಿತ್ತು. ಮುಂಬೈನ ಜೈಹಿಂದ್ ಕಾಲೇಜಿನಲ್ಲಿ ವಿಜ್ಞಾನ ವಿಷಯದಲ್ಲಿ ಇಂಟರ್‌ಮೀಡಿಯೆಟ್ ಓದುತ್ತಿದ್ದರು. ಆದರೆ ತೀವ್ರ ಅನಾರೋಗ್ಯದಿಂದಾಗಿ ಅವರಿಗೆ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗಲಿಲ್ಲ. ಅಲ್ಲಿಂದ ಮುಂದೆ ತನ್ನ ನಸೀಬಿನಲ್ಲಿರುವುದೇ ಸಂಗೀತ ಎನ್ನುವುದನ್ನು ಒಪ್ಪಿಕೊಂಡು ಕಿಶೋರಿ ಅದನ್ನೇ ಮುಂದುವರೆಸಿದರು. ಸಿನಿಮಾದಲ್ಲಿ ಹಿನ್ನೆಲೆ ಗಾಯಕಿಯಾಗಲೂ ಪ್ರಯತ್ನಿಸಿದರು. 1964ರಲ್ಲಿ 'ಗೀತ್ ಗಾಯಾ ಪತ್ಥರೋನೆ' ಸಿನಿಮಾದಲ್ಲಿ ಹಾಡಿದರು. ಇದರಿಂದ ಸಿಟ್ಟಿಗೆದ್ದ ಅವರಮ್ಮ